MYSORE LEGISLATIVE ASSEMBLY

FORTY-THIRD DAY.

Wednesday, 29th July 1953.

The House met in the Legislative Assembly Hall, Old Public Offices, Bangalore, at Twelve of the Clock.

Mr. SPEAKER (Sri H. SIDDAIYA, B.A., LL.B.) in the Chair.

QUESTIONS AND ANSWERS.

Mr. SPEAKER.—Yesterday's question No. 541 by Sri Y. M. Chandrasekhariah.

Grant of land for cultivation in Yemmedoddi Amrit Mahal Kaval, Kadur Taluk.

Q.—541. Sri Y. M. CHANDRASEKHARIAH (Kadur).—

Will the Government be pleased to state:—

(*a*) the extent of land given for cultivation in Yemmedoddi, Amrit Mahal Kaval, Kadur Taluk, so far;

(*b*) the number of applicants who have requested for lands in this kaval;

(*c*) out of those applications, the number disposed of;

(*d*) whether it has come to their notice that 40 families of Hulikere Village have requested for lands in this kaval stating that they would settle down in this kaval and cultivate lands;

(*e*) whether facilities will be provided in cases where families undertake to settle down and cultivate lands as stated above?

A.—Sri KADIDAL MANJAPPA (Minister for Revenue and Public Works).—

(*a*) 2,100 acres.
(*b*) 623.
(*c*) 23.
(*d*) Yes.
(*e*) The question is under consideration.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕು ಎಮ್ಮೆದೊಡ್ಡಿ ಅಮೃತಮಹಲ್ ಕಾವಲ್‌ನಲ್ಲಿ ಎಷ್ಟು ಎಕರೆಗಳಿವೆ?

ಶ್ರೀ ಕಡಿದಾಳ್ ಮಂಜಪ್ಪ.—14,000 ಎಕರೆಗಳು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದರಲ್ಲಿ 2,100 ಎಕರೆಗಳನ್ನು ಸಾಗಿಗೆ ಕೊಟ್ಟಿರುವುದಾಗಿ ತಿಳಿಸಿದ್ದೀರಿ. ಅದು ಸಾಗಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಭಾಗ ಆಗಿದೆ

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮಿಕ್ಕ ಜಮೀನುಗಳನ್ನು ಸಾಗು ಮಾಡುವುದಕ್ಕೆ ಅರ್ಜಿಗಳು ಬಂದಿವೆ, ಆಲೋಚನೆಯಲ್ಲದೆಯೆಂದು ಹೇಳಿದ್ದೀರಿ. ಬಾಕಿ ಭಾಗಗಳನ್ನು ಏಕೆ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಬಾಕಿಯಿರುವ ಜಮಾನು ಇನ್ನೂ surrender ಆಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಷ್ಟು surrender ಆಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—2,100 ಎಕರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಾಕಿ ಭಾಗ ಇನ್ನೂ ಏಕೆ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಕಾರ್ಯಕ್ರಮ ಇನ್ನೂ ಮುಗಿದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹುಲಿಕೆರೆ ಹಳ್ಳಿಯ ಜನರು ಈ ಅಮೃತಮಹಲ್ ಕಾವಲಿನಲ್ಲಿ ಜಮೀನು ಕೊಡಿಸಿಕೊಡಬೇಕೆಂದು ಕೇಳಿ ಎಷ್ಟು ದಿವಸವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ನಮಾರು $1\frac{1}{2}$ ವರ್ಷ ಆಯಿತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇನ್ನೂ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ; $1\frac{1}{2}$ ವರ್ಷವಾದರೂ ಅವು ವಿಲೇವಾರಿಯಾಗದಿರಲು ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಆ ಜಮೀನು ಇನ್ನೂ ರೆವೆನ್ಯೂ ಇಲಾಖೆಗೆ ಬಂದಿಲ್ಲ, ಅಮೃತಮಹಲ್ ಇಲಾಖೆಯವರು ಬಿಟ್ಟುಕೊಡುವುದಕ್ಕೆ ಒಪ್ಪಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಲ್ಲಿನ ರೆವಿನ್ಯೂ ಅಧಿಕಾರಿಗಳು ಈ ವಿಷಯದಲ್ಲಿ ಸಾಕಾದಷ್ಟು ನಿಗಾ ಕೊಟ್ಟಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಅಮೃತಮಹಲ್ ಇಲಾಖೆಯಿಂದ ಇನ್ನೂ ಜಮೀನು ಬಿಟ್ಟುಕೊಟ್ಟಿಲ್ಲ. ರೆವೆನ್ಯೂ ಅಧಿಕಾರಿಗಳು ನಿಗಾ ಕೊಟ್ಟಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಮೃತ ಮಹಲ್ ಇಲಾಖೆಯವರು ಬಿಟ್ಟುಕೊಡುವುದಕ್ಕಾಗು ವುದಿಲ್ಲವೆಂದು ಹೇಳಿದ್ದಾರೆ, ಸರ್ಕಾರದವರು ಬಿಡಿಸಿ ಕೊಡು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಬಸಪ್ಪ.—2,100 ಎಕರೆಗಳು surrender ಆಗಿವೆಯೆಂದು ಹೇಳಿದ್ದೀರಿ. ಈ ಜಮೀನನ್ನು ಒಬ್ಬೊ ಬ್ಬರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಸಾಗುವಳಿಗೆ ಕೊಟ್ಟಿ ರುವುದು 574 ಎಕರೆಗಳು ಮಾತ್ರ. 23 ಅರ್ಜಿದಾ ರರುಗಳಿಗೆ 574 ಎಕರೆಗಳನ್ನು ಅಂದಾಜು ಮಾಡಿ ಕೊಡಲಾಗಿದೆ.

ಶ್ರೀ ಜಿ ಬಸಪ್ಪ.—2,100 ಎಕರೆಗಳ ಪೈಕಿ 574 ಎಕರೆಗಳನ್ನು ಕೊಟ್ಟ ಮೇಲೆ ಮಿಕ್ಕ ಜಮೀನು ಹಾಗೆಯೇ ಉಳಿದಿದೆಯಲ್ಲವೇ?

(ಉತ್ತರವಿಲ್ಲ.)

ಶ್ರೀ ಜಿ. ಪುಟ್ಟಸ್ವಾಮಿ.—ಈ ಪ್ರಶ್ನೆ ಯಾವ ರೀತಿಯಾಗಿ ಯಿತಿನಿಂದ ಪರಿಶೀಲನೆಯಲ್ಲಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚಿನಿಂದ.

ಶ್ರೀ ಜಿ. ಪುಟ್ಟಸ್ವಾಮಿ.—ಇತ್ತೀಚಿನಿಂದ ಅಂದರೆ ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ಮೇ ತಿಂಗಳಿನಿಂದ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ್ಗೆ 2 3 ವರ್ಷಗಳಿಂದ ಈ ಹುಲಕೆರೆಯವರೇ ಅಲ್ಲದೆ ಇನ್ನೂ ಅನೇಕ ಗ್ರಾಮ ಗಳವರು ಜಮೀನುಗಳನ್ನು ಕೇಳುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ. ಮುಂದಾದರೂ ಅರ್ಜಿಗಳು ಬಂದರೆ ಅದನ್ನು ಜಾಗ್ರತೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿಗಳನ್ನು ಪರಿಶೀ ಲನೆ ಮಾಡಿದರೂ ಅಮೃತಮಹಲ್ ಇಲಾಖೆಯವರು ಬಿಟ್ಟುಕೊಡಬೇಕು ಆಗಲೇ ಸಾಧ್ಯ.

ಶ್ರೀ ಆರ್. ಅನಂತರಾಮ್.—ಈ ಅಮೃತಮಹಲ್ ಕಾವಲಿನ ಪ್ರದೇಶದಲ್ಲಿ ಕಿತ್ತಳೆಹಣ್ಣಿನ ಬೆಳೆಯಾಗು ವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕಿತ್ತಳೆಹಣ್ಣಿನ ಬೆಳೆ ಯಾಗುವುದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಕಿತ್ತಳೆಹಣ್ಣು ಎಮ್ಮೆದೊಡ್ಡಿಯಲ್ಲಿ ಚೆನ್ನಾಗಿ ಬೆಳೆಯುತ್ತಿದೆ. ಎಮ್ಮೆ ದೊಡ್ಡಿಯಲ್ಲಿ ಉತ್ಕೃಷ್ಟವಾದ ಕಿತ್ತಳೆಹಣ್ಣಿನ ತೋಟ ಗಳಿವೆ. ಆದರಿಂದ ಅಲ್ಲಿ ಕಿತ್ತಳೆಹಣ್ಣಿನ ತೋಟದ ವ್ಯವಸಾಯವನ್ನು ಮಾಡುವುದಕ್ಕೆ ರೈತರಿಗೆ ಆ ಜಮೀ ನನ್ನು ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ. ಕಿತ್ತಳೆಹಣ್ಣು ಅಲ್ಲಿ ಬೆಳೆಯುವುದು ನನಗೆ ಗೊತ್ತಿಲ್ಲ.

Doddarayapet-Kagalavadi Road in Chamarajnagar Taluk.

Q.—94. Sri B. RACHIAH (Yelandur—Scheduled Castes).—

Will the Government be pleased to state:—

(*a*) when the Doddarayapet-Kagalavadi Road in Chamarajanagar Taluk was formed;

(*b*) the total estimate of the road;

(*c*) whether any land was acquired for the formation of this road as per Land Acquisition Act;

(*d*) if so, what is the total area and the total estimate of the acquisition charges;

(*e*) why the acquisition charges in the form of compensation was not given to the raiyats;

(*f*) whether it is not a fact that a bridge was estimated at a cost of rupees one lakh and thirteen thousand along this road across the Suvarnavathi near Alur;

(*g*) the action taken so far?

A.—Sri KADIDAL MANJAPPA (Minister for Revenue and Public Works).—

(*a*) Formed in two bits— one during 1942 and the other during 1948.

(*b*) Rs. 42,838.

(*c*) Yes.

(*d*) Total area (9 acres, 35 guntas); Acquisition charges Rs. 2,000.

(*e*) Acquisition charges have to be paid after award bills are received.

(*f*) Yes.

(*g*) An alternative proposal to construct a high level causeway at smaller cost (about Rs. 12,000) is under consideration.

ಶ್ರೀ ಬಿ. ರಾಚಯ್ಯ.—ಇಲ್ಲಿ ಉತ್ತರದಲ್ಲಿ ಇದನ್ನು ಎರಡು ಭಾಗಗಳಾಗಿ ಒಮ್ಮೆ 1942ರಲ್ಲಿ ಇನ್ನೊಂದು ಸಾರಿ 1948ರಲ್ಲಿ ಮಾಡಿದೆಯೆಂದು ಹೇಳಿದ್ದೀರಿ. ಯಾವ ಯಾವ ಭಾಗವನ್ನು ಯಾವಾಗ ಯಾವಾಗ ಮಾಡಿದ ರೆಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಅವಧಿಯಲ್ಲಿ ಒಂದಷ್ಟನ್ನು ಮಾಡಿದ್ದಾರೆ; ಇನ್ನೊಂದು ಅವಧಿಯಲ್ಲಿ ಇನ್ನಷ್ಟನ್ನು ಮಾಡಿದ್ದಾರೆ. ಯಾವ ಯಾವಾಗ ಯಾವುದನ್ನು ಮಾಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ರಾಚಯ್ಯ.—ಯಾವ ಇಲಾಖೆಯವರು ಮಾಡಿದರು?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು.

ಶ್ರೀ ಬಿ. ರಾಚಯ್ಯ.—ಸೇತುವೆಯ ಖರ್ಚು ಇದರಲ್ಲಿ ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಹಾಗಾದರೆ ಅದಕ್ಕೆ ಬೇರೆ ಪೊಬಲಗನ್ನು ಒದಗಿಸಿದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೊಂದು High Level Causeway ಮಾಡಬೇಕಿದೆ.

ಶ್ರೀ ಬಿ. ರಾಚಯ್ಯ.—ಕಳೆದ ಅಧಿವೇಶನದಲ್ಲಿ 144 ನೆಯ ಪ್ರಶ್ನೆಯ ಸಂಬಂಧವಾಗಿ ಉತ್ತರಕೊಡುತಾ